ಪಶ್ಚಿಮಕ್ಕೆ 20 ಅಡಿ ಅಗಲದ ರಸ್ತೆ ಕ್ರಯದಾರರಿಗೆ ಸೇರಿದ ಸ್ವತ್ತು, ಉತ್ತರಕ್ಕೆ ಸರ್ವೇ ನಂ.6/1 ಮತ್ತು ದಕ್ಷಿಣಕ್ಕೆ 10 ಮತ್ತು 11 ಎಂದು ಬರೆದಿದೆ. ನಿ.ಪಿ.1 ರ ಶೆಡ್ಯೂಲಿನಲ್ಲಿ ಪೂರ್ವ ಹಾಗೂ ಪಶ್ಚಿಮದ ಚೆಕ್ಕುಬಂದಿಗಳನ್ನು ನಾನು ಸೃಷ್ಟಿಸಿ ಬರೆದಿದ್ದೇನೆ ಎಂದರೆ ಸುಳ್ಳು. ದಾವಾ ಆಸ್ತಿಯ 4 ದಿಕ್ಕುಗಳಲ್ಲಿ ಸರ್ವೇ ನಂ.9/2, ಕದಿರೇನಹಳ್ಳಿ ಗ್ರಾಮ ಎಂದು ಇಲ್ಲ ಎಂದರೆ ಸುಳ್ಳು.

(ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

<u>ದಿ:13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಸಿ.ಹೆಚ್.ಆರ್ ವಕೀಲರಿಂದ :</u>

50. ನಿ.ಪಿ.1 ರಲ್ಲಿ ಒ.ಎಸ್.1308/1987 ರ ಪ್ರಕಾರ ಸರ್ವೇ ನಂ.6/2 ರ ಬದಲಾಗಿ ಸರ್ವೇ ನಂ.9 ಎಂದು ಆಗಿದ್ದು ನ್ಯಾಯಾಲಯದಲ್ಲಿ

ತೀರ್ಮಾನವಾಗಿರುತ್ತದೆ ಎಂದು ಬರೆದಿದೆ ಎಂದರೆ ಸರಿ. ಸದರಿ ಆದೇಶ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ವಜಾ ಆಗಿದೆ ಎಂದರೆ ಸರಿ. ಸದರಿ ಆರ್.ಎಫ್.ಎ ಆ ಬಳಿಕ ದಿನಾಂಕ 01.06.2004 ರಂದು ರಿಸ್ಟೋರ್ ಆಗಿದೆ ಎಂದರೆ ಸರಿ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸದರಿ ಆರ್.ಎಫ್.ಎ ದಿನಾಂಕ 01.06.2004 ರಂದು ವಜಾ ಆಗಿದ್ದು ನಾನು ನಿ.ಪಿ.1 ರ ಕ್ರಯ ಪತ್ರವನ್ನು ದಿನಾಂ ಕ 07.07.2004 ರಂದು ಬರೆಯಿಸಿಕೊಂಡಿದ್ದೇನೆ ಎಂದರೆ ಸರಿ. ಆರ್.ಎಫ್.ಎ ವಜಾ ಆದ 23 ದಿವಸದಲ್ಲಿ ನಾನು ಕ್ರಯ ಪತ್ರವನ್ನು ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಿಕೊಳ್ಳಬೇಕು ಎಂಬ ಒಂದೇ ಉದ್ದೇಶದಿಂದ ನಾನು 23 ದಿವಸದಲ್ಲಿ ಕ್ರಯ ಪತ್ರವನ್ನು ಬರೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

51. ಒ.ಎಸ್.1308/1987 ಈಗಲೂ ಸಹ ಕೋರ್ಟ್ ಹಾಲ್ ನಂ.28 ರಲ್ಲಿ ತನಿಖೆಗೆ ಬಾಕಿ ಇದೆ. ಸದರಿ ದಾವೆಯಲ್ಲಿದ್ದ ದಾವಾ ಸ್ವತ್ತು ಹಾಗೂ ನಿ.ಪಿ.1 ರ ಕ್ರಯ ಪತ್ರದಲ್ಲಿರುವ ಶೆಡ್ಯೂಲ್ ಸ್ವತ್ತು ಎರಡೂ ಒಂದೇ ಎಂದರೆ ಸರಿ. ರಿಸ್ಟೋರ್ ಆದ ನಂತರ ನಾನು ನನ್ನ ತಂದೆಯಿಂದ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಕ್ರಯ ಪತ್ರ ಮಾಡಿಲ್ಲ. ವೆಂಕಟಸುಬ್ಬಮ್ಮ ಅವರ ಉತ್ತರಾಧಿಕಾರಿಗಳಿಗೂ ಹಾಗೂ ನನಗೂ ಸದರಿ ಕ್ರಯ ಪತ್ರದ ಆಸ್ತಿಯ ಬಗ್ಗೆ ಈಗಲೂ ಸಹ ವಿವಾದ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧವಾಗಿ ವೆಂಕಟಸುಬ್ಬಮ್ಮ ಅವರ ಉತ್ತರಾಧಿಕಾರಿಗಳು ಸಾಧನೆ ಮಾಡುತ್ತಿದ್ದಾರೆ

ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 2ನೇ ವಾದಿ ಎಂದರೆ ಸರಿ. ಕ್ರಯ ಪತ್ರ ಹಾಗೂ ಕನ್ ಫರ್ಮೇಷನ್ ಡೀಡಿನ ಆಧಾರದ ಮೇರೆಗೆ ನಾನು ದಾವಾ ಆಸ್ತಿಯನ್ನು ಹೊಂದಿದ್ದೇನೆ ಎಂದು ನಾನು ನಿಲುವನ್ನು ತೆಗೆದುಕೊಂಡ ಕಾರಣ ನನ್ನನ್ನು ಸದರಿ ದಾವೆಯಲ್ಲಿ 2ನೇ ವಾದಿಯನ್ನಾಗಿ ಮಾಡಲಾಯಿತು ಎಂದರೆ ಸರಿಯಲ್ಲ. ದಿನಾಂಕ 07.07.2004ರ ಕ್ರಯ ಪತ್ರ, ದಿನಾಂಕ 27.02.2013ರ ಕನ್ ಫರ್ಮೇಷನ್ ಡೀಡ್ ಪ್ರಕಾರ ನನ್ನನ್ನು ವಾದಿಯನ್ನಾಗಿ ಪರಿಗಣಿಸಬೇಕು ಎಂದು ನ್ಯಾಯಾಲಯದ ಎದುರು ಅರ್ಜಿ ಸಲ್ಲಿಸಿದ್ದು ಅದು ವಜಾ ಆಗಿದೆ ಎಂದರೆ ಸುಳ್ಳು. ಸದರಿ ಆದೇಶದ ವಿರುದ್ಧ ನಾನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ನನ್ನನ್ನು 2ನೇ ವಾದಿಯಾಗಿ ಪರಿಗಣಿಸಿದ್ದರು ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರವೇ ನನನ್ನು 2ನೇ ವಾದಿಯಾಗಿ ಪರಿಗಣಿಸಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

52. 1988ರಲ್ಲಿ ನನ್ನ ತಂದೆ ವೆಂಕಟಸುಬ್ಬಮ್ಮ ಅವರಿಗೆ ದಾವಾ ಆಸ್ತಿಗೆ ರೂ.1,00,000/- ಕೊಟ್ಟಿದ್ದರು. ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನಿ.ಪಿ.2ನ್ನು ಬರೆದುಕೊಟ್ಟಂತಹ ಅಕ್ಕಯ್ಯಮ್ಮ ಈಗ ಇಲ್ಲ. ನಿ.ಪಿ.2ಕ್ಕೆ ಸಹಿ ಹಾಕಿದ ವ್ಯಕ್ತಿಗಳಿಗೆ ಇಂಗ್ಲೀಷ್ ಬರುವುದಿಲ್ಲ ಎಂದರೆ ಸರಿಯಲ್ಲ. ಅಕ್ಕಯ್ಯಮ್ಮ ಅವರ ಮಗ ಸದರಿ ದಾಖಲೆಗೆ ಇಂಗ್ಲೀಷಿನಲ್ಲಿ ಸಹಿ ಹಾಕಿದ್ದು ಉಳಿದ ಎಲ್ಲಾ ವ್ಯಕ್ತಿಗಳು ಕನ್ನಡದಲ್ಲಿ ಸಹಿ ಹಾಕಿದ್ದಾರೆ.

ನಿ.ಪಿ.2 ರಲ್ಲಿ ಏನು ಬರೆದಿದೆ ಎಂದು ಅಕ್ಕಯ್ಯಮ್ಮ ಅವರ ಮಕ್ಕಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅವರ ಮಕ್ಕಳು ಏನೇನು ಓದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಅವರಿಗೆ ಓದು ಬರಹ ಇದೆ. ಅಕ್ಕಯ್ಯಮ್ಮ ಅವರ ಹೆಣ್ಣು ಮಕ್ಕಳು ಏನು ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಕ್ಕಯ್ಯಮ್ಮ ಅವರ ಮಕ್ಕಳನ್ನು ಅವರ ತಾಯಿಯೇ ಉಪನೋಂದಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಬಂದಿದ್ದರು. ನಿ.ಪಿ.2 ಕ್ಕೆ ಅಕ್ಕಯ್ಯಮ್ಮ ಸಹಿ ಹಾಕು ಎಂದು ಹೇಳಿದ ಕಾರಣ ಅವರ ಮಕ್ಕಳು ಸಹಿ ಹಾಕಿದ್ದರು ಎಂದರೆ ಸರಿಯಲ್ಲ.

53. ನಿ.ಪಿ.2 ನ್ನು ನಾನು ತಯಾರಿಸಿಲ್ಲ. ನಿ.ಪಿ.2 ನ್ನು ನಾನೇ ತಯಾರಿಸಿಕೊಂಡು ಹೋಗಿ ಸಹಿ ಹಾಕಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ನ್ನು ಆರ್.ಎಫ್.ಎ ಬಾಕಿ ಇರುವ ಸಂದರ್ಭದಲ್ಲೇ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಒ.ಎಸ್.1308/1987 ರ ದಾವೆ ಬಾಕಿ ಇರುವ ಸಂದರ್ಭದಲ್ಲಿ ನಾನು ನಿ.ಪಿ.2 ನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ರ ಮಧ್ಯೆ 9 ವರ್ಷಗಳ ಅಂತರ ಇದ್ದ ಕಾರಣ ನಿ.ಪಿ.1 ಹಾಗೂ 2 ಕಾನೂನು ಬಾಹಿರ ದಾಖಲೆಗಳು ಎಂದರೆ ಸರಿಯಲ್ಲ.

54. ನಾನು ಕೇಳುತ್ತಿರುವ ದಾವಾ ಆಸ್ತಿಗಳು ಒ.ಎಸ್.2140/1982 ರ ದಾವೆಯಲ್ಲಿ ವಾದಿಗೆ ಬಂದಿದೆ ಎಂದರೆ ಸರಿಯಲ್ಲ. ಆ ಬಳಿಕ ವೆಂಕಟೇಶ್ ಮೂರ್ತಿ ಹಾಗೂ ನಾಗೇಶ್ ಅವರಿಗೆ ವಾದಿಗಳು ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ನನ್ನ

ಮೇಲೆ ದಾವೆ ಹಾಕಿದ್ದು ಸದರಿ ದಾವೆ ವಜಾ ಆಗಿದೆ ಎಂದು ನುಡಿಯುತ್ತಾರೆ. ದಿನಾಂಕ 28.08.2004 ರಲ್ಲಿ ನಾಗೇಶ್ ಮತ್ತು ಅವರ ಹೆಂಡತಿಗೆ, ದಿನಾಂಕ 18.03.1996 ರಲ್ಲಿ ಪ್ರೇಮ ಎನ್ನುವವರಿಗೆ ದಾವಾ ಸ್ವತ್ತಿನಲ್ಲಿದ್ದ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಅವರ ಹೆಸರಿಗೆ ಖಾತಾ ಮತ್ತು ಇ-ಖಾತಾ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಈಗಲೂ ಸಹ ಅವರೇ ಸದರಿ ಆಸ್ತಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು.

(ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.